ಸಕ್ಕರೆ ಮತ್ತು 56,573 ಕಿಲೋ ಲೀಟರ್ ಸೀಮೆಎಣ್ಣೆಯನ್ನು ಕೇಂದ್ರವು ಬಿಡುಗಡೆ ಮಾಡುತ್ತಿದೆ ಈ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ಕೇಂದ್ರವು ಬಿಡುಗಡೆ ಮಾಡಿದಾಗ ಗ್ರಾಮಾಂತರ ಮತ್ತು ನಗರ ಎಂಬ ಭೇದವಿಲ್ಲದೆ ವಿತರಣೆ ಮಾಡಬಹುದಾಗಿರುತ್ತದೆ.

ಕೆ.ಜಿ.ಎಫ್ ಅನ್ನು ಬೆಳವಣಿಗೆ ಕೇಂದ್ರವೆಂದು ಘೋಷಿಸುವುದು.

576:(4082)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನರ ಕೆಳಮಟ್ಟದ ಆರ್ಥಿಕ ಸ್ಥಿತಿ ಹಾಗೂ ಭಾರಿ ಗಾತ್ರದ ನಿರುದ್ಯೋಗದ ದೃಷ್ಟಿಯಿಂದ ಕೆ.ಜಿ.ಎಫ್.ನ್ನು 'ಬೆಳವಣಿಗಾ ಕೇಂದ್ರ'ವನ್ನಾಗಿ ಘೋಷಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್.ಶಿವಪ್ಪ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲ ಭೂತ ಸೌಲಭ್ಯಗಳ ರಾಜ್ಯ ಸಚಿವರು):

ಅ) ಕೆ.ಜಿ.ಎಫ್.ನ್ನು ಬೆಳವಣಿಗೆ ಕೇಂದ್ರ ಎಂದು ಘೋಷಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ದಿನಾಂಕ 10.11.98ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು.

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹಸಿರು ಮತ್ತು ಕೇಸರಿ ಕಾರ್ಡ್‌ಗಳ ವಿತರಣೆ

2931:(3988)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿ ಹಂಚಲಾಗಿರುವ ಹಸಿರು ಕಾರ್ಡ್‌ಗಳ ಸಂಖ್ಯೆ ಎಷ್ಟು; ಹಾಗೂ ಹಂಚಬೇಕಾಗಿರುವುಗಳ ಸಂಖ್ಯೆ ಎಷ್ಟು?

ಆ) ಹಂಚಲಾಗಿರುವ ಕೇಸರಿ ಕಾರ್ಡುಗಳ ಸಂಖ್ಯೆ ಎಷ್ಟು? (ಕೊಡಗು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು);

ಇ) ಸೋಮವಾರಪೇಟೆ ತಾಲ್ಲೂಕಿನಲ್ಲಿ ಇಲ್ಲಿಯತನಕ ಎಷ್ಟು ಹಸಿರು ಕಾರ್ಡು ಮತ್ತು ಕೇಸರಿ ಕಾರ್ಡುಗಳನ್ನು ಹಂಚಲಾಗಿದೆ? (ವಿವರಗಳನ್ನು ನೀಡುವುದು)

ಈ) ಈ ಕಾರ್ಡುಗಳಿಗೆ ಅಕ್ಕಿ, ಗೋಧಿ, ಸೀಮೆಎಣ್ಣೆ ಎಷ್ಟು ಹಂಚಲಾಗುತ್ತಿದೆ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ 34,334 ಹಸಿರು ಪಡಿತರ ಚೀಟಿಗಳಿವೆ. ಹಸಿರು ಪಡಿತರ ಚೀಟಿಗಳನ್ನು ಕೋರಿ 327 ಅರ್ಜಿಗಳು ಬಂದಿದ್ದು ಈ ಅರ್ಜಿಗಳನ್ನು ಪರಿಶೀಲಿಸಲಾಗಿ 277 ಅರ್ಜಿಗಳು ಹಸಿರು ಪಡಿತರ ಚೀಟಿ ಪಡೆಯಲು ಅರ್ಹರೆಂದು ಗುರುತಿಸಿದ್ದು. ಇವರಿಗೆ ಹಸಿರು ಪಡಿತರ ಚೀಟಿ ಹಂಚಬೇಕಾಗಿದೆ.

ಆ) ಕೊಡಗು ಜಿಲ್ಲೆಯಲ್ಲಿ ತಾಲ್ಲೂಕುವಾರು ಹಂಚಲಾಗಿರುವ ಕೇಸರಿ ಪಡಿತರ ಚೀಟಿ ವಿವರ:

ಮಡಿಕೇರಿ	11,285
ವಿರಾಜಪೇಟೆ	12,014
ಸೋಮವಾರಪೇಟೆ	8,219
ಒಟ್ಟು	31,518

ಇ) ಸೋಮವಾರಪೇಟೆಯಲ್ಲಿ ಹಂಚಲಾಗಿರುವ ಪಡಿತರ ಚೀಟಿಗಳ ವಿವರ:

ಹಸಿರು ಪಡಿತರ ಚೀಟಿ	34,334
ಕೇಸರಿ ಪಡಿತರ ಚೀಟಿ	8,219
ಒಟ್ಟು	42,553

ಈ) ಕೊಡಗು ಜಿಲ್ಲೆಯಲ್ಲಿ 1998ನೇ ಅಕ್ಟೋಬರ್ ತಿಂಗಳಲ್ಲಿ ತಾಲ್ಲೂಕುವಾರು ಹಂಚಿಕೆ ಮಾಡಿದ ಪಡಿತರ ಪದಾರ್ಥಗಳ ವಿವರ ಈ ಕೆಳಗಿನಂತಿದೆ.

	ಮಡಿಕೇರಿ	ವಿರಾಜಪೇಟೆ	ಸೋಮವಾರಪೇಟೆ	ಒಟ್ಟು
	(ಅಂಕಿಗಳು ಕ್ವಿಂಟಾಲ್‌ಗಳಲ್ಲಿ)			
ಬಿಪಿಎಲ್ ಅಕ್ಕಿ	420	1100	1340	2860
ಇಜಿಪಿಎಲ್‌ಅಕ್ಕಿ	517	1318	1515	3350
ಎಪಿಎಲ್ ಅಕ್ಕಿ	1630	1150	1240	4020
ಒಟ್ಟು	2567	3568	4095	10230
BPL Wheat	100	270	330	770
EBPL Wheat	132	295	333	760
APL Wheat	260	100	200	560
Total	492	665	863	2020
Sugar	660	770	825	2255
Kerosene Oil	208KL	276KL	260KL	744KL

ಕೊಡಗಿನ ಸೋಮವಾರಪೇಟೆಯ ಮಾದಾಪುರದಲ್ಲಿ ಪೊಲೀಸ್ ಠಾಣೆ ಪ್ರಾರಂಭಿಸುವುದು.

2932:(4073)

ಶ್ರೀ ಅಪ್ಪಚ್ಚು ರಂಜನ್ (ಸೋಮವಾರ ಪೇಟೆ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗಿನಲ್ಲಿ ಕಳೆದ ಎರಡು ವರ್ಷಗಳಲ್ಲಿ ಕಳ್ಳತನ, ಕೊಲೆ, ದರೋಡೆ, ಅತ್ಯಾಚಾರ, ದೌರ್ಜನ್ಯಗಳಲ್ಲಿ ಎಷ್ಟು ಮೊಕದ್ದಮೆಗಳು ದಾಖಲಾಗಿವೆ? (ದಿ: 1-4-97ರಿಂದ ಇಲ್ಲಿಯತನಕ ವಿವರ ನೀಡುವುದು);

ಆ) ಪತ್ತೆ ಹಚ್ಚಲಾಗಿರುವ ಮೊಕದ್ದಮೆಗಳು ಎಷ್ಟು? (ತಾಲ್ಲೂಕುವಾರು